ನಿಮ್ಮ ದೊಡ್ಡಕ್ಕ ಪಾಪ ಗಂಡ ಸತ್ತಿದ್ದ. ಮಕ್ಳು ಕೈಗೆ ಬಂದಿರ್ಲಿಲ್ಲ. ಬಂದು ಬೇಡ್ಕಂಡಿದ್ಲು. ನನ್ನಪ್ಪನಾಸ್ತಿ. ಸ್ವಲ್ಪನಾದ್ರೂ ಕೊಡೋ. ಬದುಕಿಗಾಗುತ್ತೆ ಅಂತ. ನೀವು ಕೊಡ್ಲಿಲ್ವೇ? ಆಗ ನನ್ಗೆ ಮದುವೆಯಾಗಿ ಎರಡು ತಿಂಗ್ಳಾಗಿತ್ತು. ನಿಮ್ಮಕ್ಕ ಬಂದು ಜಗಳವಾಡಿ, ರಂಪವಾಗಿ ಮನೆ ಎದ್ರು ಜನ ಸೇರಿದ್ರು. ಹೋಗ್ತಾ ಆಕೆ ರಸ್ತೇಲಿ ಕೈಯಲ್ಲಿ ನೆಲದ ಹಿಡಿಮಣ್ಣನ್ನು ಗಾಳಿಗೆ ತೂರಿ ಅಂದಿದ್ಲು, 'ರಕ್ತ ಹಂಚ್ಕೊಂಡು, ಎತ್ತಿ ಆಡಿಸ್ದವಳ ಹೊಟ್ಟೆ ಉರಿಸ್ತಿದ್ದೀಯ... ಈ ಆಸ್ತಿ ನಿನ್ಗೆ ದಕ್ಕದಿರ್ಲಿ... ನಿನ್ನ ವಂಶ ನಿರ್ವಂಶವಾಗ್ಲಿ... ಅಪರಿಚಿತರು, ಅಯೋಗ್ಯರು ತಿನ್ಲಿ' ಶಾಪ ಮಾವ... ಶಾಪ... ನಿನ್ನ ಪಾಪದ ಫಲ ನನ್ನ ಮಗು ಸತ್ತು ಹೋಯ್ತು. ಕೊಡ್ತೀಯಾ.... ನನ್ನ ಮಗು ಬೇಕು.... ಕೊಡು."

ಮಾವ ಕಲ್ಲಾದ.

ಅಪ್ಪಅಮ್ಮನಲ್ಲಿ ಬಂದ್ಲು. "ನಾನೇನು ಸ್ವಯಂಭೂನಾ? ಭೂಮಿ ಉಳುತ್ತಿದ್ದಾಗ ಪೆಟ್ಟಿಗೆಯಲ್ಲಿ ಸಿಕ್ಕ ಸೀತೇನಾ? ನಿಮ್ಮ ಮಗಳು. ನಿಮ್ಮ ತಳಿ. ಕೆಟ್ಟಿರಬಹ್ದು. ಮಗೂನಾ ಹೆತ್ತು ಹೊರೋ ಚೈತನ್ಯವಿಲ್ಲದ ಐಬಿರಬಹುದು. ನನ್ನೊಳಗಿನ ಪ್ರಕೃತಿ ದೋಷಗಳಿಗೆ ನೀವೂ ಬಾಧ್ಯರು. ಸೃಷ್ಟಿಸಿದ್ದು ನೀವು. ನನ್ನ ನಡವಳಿಕೆಯಲ್ಲಿ ಲೋಪವಿದ್ರೆ ಹೇಳಿ, ತಿದ್ಕೊತೀನಿ."

ಅಮ್ಮ ಅತ್ರು. ಅಪ್ಪ ಸಂತೈಸಲು ಹತ್ರ ಬಂದ್ರು.

"ಮುಟ್ಟಬೇಡಿ. ಹೊರಡಿ. ಬೆಳಿಗ್ಗೆ ನನ್ಗಿಲ್ಲಿ ಯಾರೂ ಇರ್ಬಾರ್ದು. ನಿಮ್ಮ ಬದುಕು ನಿಮ್ಗೆ. ನನ್ನ ಬದುಕು ನನ್ಗೆ. ಬಿರುಗಾಳಿ ಎದ್ದಿದೆ. ಕುಂಭದ್ರೋಣ ಮಳೆ ಸುರೀತಿದೆ. ಎಲ್ಲ ಕಡೆ ಪ್ರವಾಹ. ಮುಂದೊಂದು ದಿನ ಎಲ್ಲಾ ಶಾಂತವಾದ್ರೆ ಮತ್ತೆ ಬೆಸ್ಕೊಂಡು ಬದ್ಕೋಣ."

ಎಲ್ಲ ಹೊರಟ್ರು. ಹಿಂದೆ ಗಂಡಾನೂ ಹೊರಟ. ಅವನಿಗಂದ್ಲು:

"ಏ ಸೊಬಗ! ನಿನಗೆರಡು ಮಾತಿದೆ! ನಿಲ್ಲು! ಮಕ್ಕಳಾಗ್ಲಿಲ್ಲ. ನನಗಾಗ್ಲಿಲ್ವೋ? ನಿನಗಾಗ್ಲಿಲ್ವೋ? ಬೀಜ ಮೊಳೆತಿತ್ತು. ಗಿಡವಾಗಿ ರೂಪುಗೊಂಡಿತ್ತು. ಬೇರು ಬಿಡಬಹುದಿತ್ತು. ಹೆಮ್ಮರವಾಗಿ ಬೆಳೀಬಹುದಿತ್ತು. ನಾನು ಸಹಕರಿಸ್ದೆ. ಅದು ಬೆಳೀಲಿಲ್ಲ. ಅದೇನು ನೆಲದ್ದೇ ಸಮಸ್ಯೆನಾ? ಬೀಜಾನೂ ಹುಳುಕಿರಬಹುದು. ಹಳತಿರಬಹುದು. ದಕ್ಷಿಣದಲ್ಲಿ ಒಂದು ದೇವಸ್ಥಾನವಿದೆಯಂತೆ. ದೇವಿಯ ಆವಾಸಸ್ಥಾನ. ಕಾಮನ ಹುಣ್ಣಿಮೆ ರಾತ್ರೆ. ಇಡೀ ರಾತ್ರೆ ಅಲ್ಲಿ ಜಾತ್ರೆ ಮಾಡ್ತಾರೆ. ಮಕ್ಕಳಾಗದ ಹೆಣ್ಣು ಮಕ್ಕಳು ಜಾತ್ರೆಗೆ ಒಂಟಿಯಾಗಿ ಹೋಗ್ತಾರಂತೆ. ಅಲ್ಲಿಗೆ ವಯಸ್ಸು ಹುಡುಗ್ರು ಕೇಳಿಗೆ ಬರ್ತಾರಂತೆ, ಕಾಮಕೇಳಿಗೆ. ಬೇಕಾದ್ದವ್ನ ನೀನು ಆರಿಸ್ಕೋಬಹುದು, ಇಡೀ ರಾತ್ರಿ ಅವನೊಟ್ಟಿಗೆ ಕಳೀಬಹುದು, ಬೆಳಕು ಹರೀತಿದ್ದ ಹಾಗೆ ಊರು ಸೇರಬಹುದು. ದೇವಿಯ ಮಹಾತ್ಮೆ ಎಷ್ಟು ಅಂದರೆ ಬಸುರು ನಿಶ್ಚಿತ. ಹೋಗಿ ಬರ್ಲಾ?"

ಅವನು ನಿಂತೇ ಇದ್ದ. "ಹುಟ್ತಾ ಎಲ್ಲ ಹೆಣ್ಣು ಮಕ್ಳು ದೇವತೆಯರೇ! ನೀವು ದೇವರಾಗಿ. ಅದುಬಿಟ್ಟು ಸೈತಾನರಾದ್ರೆ ಹೊಂದಿಕೊಳ್ಳೋ ಸಡಗರದಲ್ಲಿ ದೆವ್ವಗಳಾಗ್ತಾರೆ ಅವ್ರು."

"ಕಾಲೇಜು ಪ್ರಿನ್ಸಿಪಾಲರತ್ರ ಮಾತಾಡಿದ್ದೀನಿ. ಮತ್ತೆ ನಾನು ಕೆಲ್ಸಕ್ಕೆ ಹೋಗ್ತೀನಿ. ನನಗೆ ಮನೆಯಲ್ಲಿ ಜನ ಬೇಡ. ಇದು ನಿನ್ನ ಮನೆ. ಅದರಲ್ಲಿ ನಾನಿರ್ತೀನಿ. ಅಪ್ಪ ಅಮ್ಮನಿಗೆ ಊರಿಗೆ ಹೋಗೋಕ್ಹೇಳು. ನನ್ನ ಅಪ್ಪಅಮ್ಮನ್ನ ನಾನು ಕಳಿಸ್ತೀನಿ. ಮಾನವಾಗಿ ದಿನಾಲೂ ಮನೆಗೆ ಬರೋದಾದ್ರೆ ಇದೊಂದು ಸಂಸಾರ. ಆಗಲಿಲ್ವಾ? ನಿನ್ನ ದಾರಿ ನಿನಗೆ. ನನ್ನದು ದಾರಿ ನನಗೆ."

ಹೊರಟ.

"ರಾಜಕುಮಾರ ತಲೆ ಎತ್ತಿ ನೋಡೋ. ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡೋ... ಪ್ರೀತಿಸ್ತೀನಿ... ಅಗಾಧವಾಗಿ ಪ್ರೀತಿಸ್ತೀನಿ. ಹೆಣ್ಣು ನಾನು, ಪ್ರಕೃತಿ. ಪ್ರೀತಿಸ್ತೀನಿ. ಜೀವಂತವಾಗಿರೋದನ್ನೆಲ್ಲ